Mandya District, shall have managerial control even the affairs of the Company;

b) if so, the steps taken by the Government in this regard ?

SRI J. H. PATEL (Minister for Large & Medium Industries).—

a) No.

b) Does not arise.

ಚಳ್ಳಕೆರೆ ತಾಲ್ಲೂಕು ಅಮೃತಮಹಲ್ ಕಾವಲ್‌ನಲ್ಲಿರುವ ಜಮೀನನ್ನು ಅನಧಿಕೃತವಾಗಿ ಸಾಗಂವಳಿ ಮಾಡಂತ್ತಿರುವುದಂ

೧೫೨೭. ಪೂರ್ಣಮುತ್ತಪ್ಪ (ಪೊಳಕಾಲ್ಮೂರು).—ಮಾನ್ಯ ಕಂದಾಯ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಳ್ಳಕೆರೆ ತಾಲ್ಲೂಕ್ ಹಿರೆಕೆರೆ ಅಮೃತ ಮಹಲ್ ಕಾವಲು ಸ.ನ. ೩೩ ಮತ್ತು ೩೪ ರಲ್ಲಿ ಬಗರ್ ಹುಕುಂ ಸಾಗು ಮಾಡಿರುವ ವಿಸ್ತೀರ್ಣವೆಷ್ಟು ?

ಆ) ಈ ಪ್ರದೇಶವನ್ನು ತೆರವು ಮಾಡಿಸಲು ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಚಳ್ಳಕೆರೆ ತಾಲ್ಲೂಕು ಹಿರೆಕೆರೆ ಅಮೃತಮಹಲ್ ಕಾವಲು ಸ.ನ. ೩೩ ಮತ್ತು ೩೪ ರಲ್ಲಿ ಸುಮಾರು ೪೩೪–೦೦ ಎಕರೆ ಪ್ರದೇಶವನ್ನು ೧೮೫ ಜನರು ಅನಧಿಕೃತ ಸಾಗುವಳಿ ಮಾಡಿರುತ್ತಾರೆ.

ಆ) ಸರ್ಕಾರದ ಪತ್ರದ ಸಂಖ್ಯೆ ಆರ್‌ಡಿ ೩೭ ಎಲ್‌ಜಿಸಿ ೮೬, ದಿನಾಂಕ ೧೬ನೇ ಮೇ ೧೯೮೫ರ ಆದೇಶದ ಮೇರೆಗೆ ಅನಧಿಕೃತ ಸಾಗುವಳಿದಾರರಿಗೆ ಖಿಲ್ಲಾ ಪಡಿಸಲು ನೋಟಿಸನ್ನು ಕೊಡಲಾಗಿದೆ.

ತಾಲ್ಲೂಕಂ ಮಂಟ್ಟದಲ್ಲಿ ಭೂನ್ಯಾಯ ಮಂಡಲಿಗಳ ರಚನೆ

೧೫೩೬. ಶ್ರೀ ಬಿ. ನಾರಾಯಣಸ್ವಾಮಿ (ಚಾಗೇಪಲ್ಲಿ) —ಮಾನ್ಯ ಕಂದಾಯ ಹಾಗೂ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತಾಲ್ಲೂಕು ಮಟ್ಟದಲ್ಲಿ ಭೂ ನ್ಯಾಯ ಮಂಡಳಿಗಳು ರಚನೆಯಾಗಿರುವುದು ನಿಜವೆ,

ಆ) ಸದರಿ ಮಂಡಳಿಗಳ ಸದಸ್ಯರನ್ನು ನೇಮಕ ಮಾಡುವಾಗ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಆದಿಮ ಜಾತಿಯಂವರೊಬ್ಬರನ್ನು ಮಂಡಳಿಯ ಸದಸ್ಯರನ್ನಾಗಿ ನೇಮಕ ಮಾಡಬೇಕೆಂದು ಸರ್ಕಾರಿ ಆದೇಶವಿದ್ದರೂ ಚಾಗೇಪಲ್ಲಿ ಭೂ ನ್ಯಾಯ ಮಂಡಳಿಯು ಆದೇಶವನ್ನು ತಿರಸ್ಕರಿಸಿ ಸಮಿತಿಗೆ ಸದರಿ ಜಾತಿಯವರನ್ನು ನೇಮಿಸದೇ ಬೇರೆಯವರನ್ನು ನೇಮಿಸಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ.

ಇ) ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಳ್ಳುವ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೌದು.

ಆ) ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.